★★★

ಪ್ರಾಯ ಏರುತ್ತಿದ್ದ ಕಾಲದಲ್ಲಿ ಆಗಾಗ ಮನೆ ತೊರೆಯುತ್ತಿದ್ದ ಶ್ರೀನಿವಾಸನಿಗೆ ಊರೂರು ಅಡ್ಡಾಡಿಕೊಂಡು ಬೆಂಗಳೂರಿನ ರೈಲ್ವೇ ಸ್ಟೇಷನ್‌ನಲ್ಲಿ ನಿಂತಿರುವಾಗ ದೊಡ್ಡ ಕಾರೊಂದು ಕಂಡಿತು. ಕಾರಿನ ಮುಂಭಾಗದಲ್ಲಿ 'ವೈಭವಲಕ್ಷ್ಮಿ' ಎಂದು ಬರೆದಿದ್ದಲ್ಲದೆ, ಕೈಯಿಂದ ಕಾಸು ಉದುರಿಸಿಕೊಂಡು ತಾವರೆಯ ಮೇಲೆ ಕಿರೀಟ ತೊಟ್ಟು ನಿಂತಿದ್ದ ಲಕ್ಷ್ಮಿಯ ಚಿತ್ರ ಕಾಣಿಸಿತು. ತನ್ನ ಮನೆಯಲ್ಲಿದ್ದ ದೇವರ ಪಟ ಇಲ್ಲಿಯೂ ಇದೆಯಲ್ಲಾ ಎಂದು ತನಗರಿವಿಲ್ಲದೆ ಕೈ ಮುಗಿದ. ಹಾಗೆ ನೋಡಿದರೆ ಶ್ರೀನಿವಾಸನಿಗೆ ಅಪ್ಪನ ಎದುರು ತಲೆ ಸೆಟೆಸಿ ಬಾಯಿಗೆ ಬಂದದ್ದು ಮಾತನಾಡಿಯೇ ರೂಢಿ ಶಿವಾಯಿ, ಮನೆ ದೇವರಾದ ಆಂಜನೇಯಸ್ವಾಮಿಯ ಮುಂದೆಯೂ ಕೈ ಮುಗಿದ ಅಭ್ಯಾಸವಿರಲಿಲ್ಲ.

ತಾಯಿ ತೀರಿಕೊಂಡ ನಂತರ ಮನೆ ಬಿಟ್ಟು ಬೆಂಗಳೂರು ಸಿಟಿ ಸೇರುವಲ್ಲಿ, ಅಲ್ಲೆಲ್ಲಾ ಮಲಗಲು ಜಾಗವಿಲ್ಲದೆ, ತಿಂದದ್ದು ಬಾಯಿಗೆ ಹಿಡಿಸದೆ, ಸತ್ತೆಯೋ ಕೆಟ್ಟೆಯೋ ಅನ್ನುವವರಿಲ್ಲದೆ ಇದ್ದುದರ ದೈನೇಸಿ ಸ್ಥಿತಿಯಿಂದಲೋ ಏನೋ ಎದುರು ನಿಂತ ವಾಹನದ ಗಾಜಿನ ಮೇಲಿದ್ದ ಚಿತ್ರಪಟಕ್ಕೆ ಕೈ ಮುಗಿಯುತ್ತಿದ್ದರೆ, ಕಾರಿನಿಂದ ಇಳಿದ ಹಿರಿಯರು ಶ್ರೀನಿವಾಸನನ್ನು ಕೂಲಿ ಬೇಡುತ್ತಿದ್ದಾನೆಂದೇ ತಿಳಿದು 'ತಗಳಪ್ಪ' ಎನ್ನುತ್ತಾ ಮೂರು ಸೂಟ್‌ಕೇಸು ಮತ್ತು ಹ್ಯಾಂಡ್ ಬ್ಯಾಗು ಹೊರಿಸಿದರು. ಮಗಳನ್ನು ಹೈದರಾಬಾದಿಗೆ ಕಳುಹಿಸಿಕೊಡಲು ಬಂದಿರಬೇಕೆಂದು ಆ ಹಿರಿಯರ ಮಾತಿನಲ್ಲೇ ಶ್ರೀನಿವಾಸನಿಗೆ ಸ್ಪಷ್ಟವಾಯಿತು. ಹೊಟ್ಟೆ ಬಾಯಿಬಿಡುತ್ತಿದ್ದಾಗ ಈ ಬಗೆಯಲ್ಲಿ ಅನ್ನಕ್ಕೆ ದಾರಿಯಾಗಿದ್ದು ತಾನು ವೈಭವಲಕ್ಷ್ಮಿಗೆ ಕೈ ಮುಗಿದದ್ದೇ ಕಾರಣವಿರಬಹುದೆಂದು ಭಾವಿಸಿ ಅಪ್ಪ ಅಮ್ಮ, ಗೋವಿಂದ ಮತ್ತು ರಾಜಿಗೆ ದೇವರಲ್ಲಿ ಇದ್ದ ಭಕ್ತಿ ಇದೀಗ ತನ್ನಲ್ಲೂ ಮೊಳೆಯಿತೆಂದೆನಿಸಿತು.

ಯಜಮಾನರು ಹೇಳಿದಂತೆ ಬ್ಯಾಗುಗಳನ್ನು ರೈಲಿಗೆ ಮುಟ್ಟಿಸಿ, ಅದು ಹೊರಡುವಲ್ಲಿ 'ಎಷ್ಟಪ್ಪಾ?' ಅಂದರು. ಅಷ್ಟರಲ್ಲಿ, ಕೆಂಪು ಅಂಗಿ ಧರಿಸಿ, ತೋಳುಗಳಿಗೆ ಬಿಲ್ಲೆ ಸಿಕ್ಕಿಸಿಕೊಂಡ ಒಂದಿಬ್ಬರು ಬಂದು ಶೀನಿಯ ಕೊರಳ ಪಟ್ಟಿ ಹಿಡಿದು 'ಅಸೋಸಿಯೇಷನ್‌ಗೆ ತಿಳಿಸದೆ ಪ್ಲಾಟ್‌ಫಾರಂನಲ್ಲಿ ಕೂಲಿ ಯಂಗಣ್ಣ ಮಾಡ್ತಾ ಇದ್ದೀಯೇ?' ಎಂದು ಗದರಿದರು. ಮನೆಯಲ್ಲಷ್ಟೇ ಜೋರು ಮಾಡಿ ಗೊತ್ತಿದ್ದ ಶೀನಿ ನಡುಗಿ ನೀರಾಗಿಬಿಟ್ಟ. ಯಜಮಾನರು ಕೂಲಿಗಳನ್ನು ಗದರುತ್ತಾ 'ಅವನು ನಮ್ಮ ಮನೆಯವನೆ, ಲಗೇಜು ಇತ್ತು ಅಂತ ಇಲ್ಲಿಗಂಟ ಬಂದ, ಈಗ ಕಾರಿನಲ್ಲೇ ಬರುತ್ತಾನೆ' ಎಂದುಬಿಟ್ಟರು. ಕೂಲಿಯವರು 'ಇವನ ಮುಖಾ ನೋಡಿ ಎಷ್ಟಪ್ಪಾ ಅಂದ್ರಲ್ಲ, ಅದು ಕೂಲಿ ಸಮಾಚಾರ ಅಂತ ಬಂದೊ, ನಿಮ್ಮವನೇ ಅಂದ್ರೆ ಕರ್ಕಂಡು ಹೋಗಿ ಸಾ... ನಮ್ಮದೇನು ಕಂಪ್ಲೇಂಟ್ ಇಲ್ಲಾ' ಎಂದರು.

ಯಜಮಾನರು 'ಬಾರಯ್ಯ' ಅಂದದ್ದೇ ಶೀನಿ ಕಾರಿನ ಬಳಿ ಹೋಗಿ ತಾನೇ ಬಾಗಿಲು ತೆರೆದ. ಮುಂದಿನ ಸೀಟಿನಲ್ಲಿ ಕೂರುತ್ತಾ ಯಜಮಾನರು 'ಇವತ್ತು ಡ್ರೈವರ್ ರಜಾ' ಎಂದು ಶೀನಿಯ ಊರುಕೇರಿಯ ಬಗ್ಗೆ ಕೇಳಿದರು. ಶೀನಿ, 'ಹೇಗೂ ನಿಮ್ಮ ಆಳು ಅಂದಿರಲ್ಲಾ, ನಿಮ್ಮಲ್ಲೇ ಕೆಲಸ ಕೊಡಿ, ಮನೆ ಮೂಲೆಯಲ್ಲಿ ಬಿದ್ದಿರುತ್ತೇನೆ' ಎಂದ. ಯಜಮಾನರ 'ವೈಭವಲಕ್ಷ್ಮಿ ಫೈನಾನ್ಸ್ ಮತ್ತು ರಿಯಲ್ ಎಸ್ಟೇಟ್' ಆಫೀಸಿನಲ್ಲಿ ವರ್ಷಗಟ್ಟಲೆ ಕಸ ಗುಡಿಸಿ, ಬಂದವರಿಗೆ ಟೀ ಬಿಸ್ಕತ್ತು ತಂದುಕೊಡುವ ಕೆಲಸ ಮಾಡಿದ.

ಅಪ್ಪನ ಮುಂದೆ ಯಾವ ಗಳಿಗೆಯಲ್ಲಾದರೂ ವೀರಭದ್ರಾವತಾರ ತಾಳುತ್ತಿದ್ದವನು ಫೈನಾನ್ಸ್ ಆಫೀಸಿನಲ್ಲಿ ಧಣಿಗಳ ಮುಂದೆ, ಬಂದವರ ಎದುರು ಅತ್ತಿತ್ತ ಅಲ್ಲಾಡದೆ ಕೈ ಕಟ್ಟಿ ನಿಲ್ಲುತ್ತಿದ್ದ. 'ಹ್ಞಾ ಹ್ಞೂ' ಎಂಬುದು ಬಿಟ್ಟರೆ ಬೇರೆ ಮಾತಿಲ್ಲ. ರಾತ್ರಿ ಯಜಮಾನರ ಬಂಗಲೆಯಲ್ಲೇ ಕಾಲ ಕಳೆಯುತ್ತಿದ್ದ ಶೀನಿ ಸಂಬಳ ಹೆಚ್ಚಾಗುವಲ್ಲಿ ಬಾಡಿಗೆ ರೂಮು ಹಿಡಿದ. ಕೂಡಿಟ್ಟ ಹಣದಲ್ಲಿ ಬಿಜಿನೆಸ್ ಮಾಡಿ